# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ಹಿರಿಯೂರು

ಸಿಸಿ ನಂ. 60/2025

ಪಿರ್ಯಾದಿಃ ಹಿರಿಯೂರು ಗ್ರಾಮಾಂತರ ಪೋಲಿಸ್ ಠಾಣೆ

**ವಿರುದ್ಧ**

ಆರೋಪಿತರುಃ
1. **ವೆಂಕಟೇಶ** ತಂದೆ ಹನುಮಂತಪ್ಪ, 40 ವರ್ಷ
2. **ದೇವಮ್ಮ ಯಾನೆ ದೇವಿ ಎ** ತಂದೆ ವೆಂಕಟೇಶ, 36 ವರ್ಷ
3. **ರಾಜೇಶ್ವರಿ** ತಂದೆ ಮಹೇಶ ಯಾನೆ ಸುರೇಶ, 28 ವರ್ಷ
4. **ನಾಗರಾಜ ಹೆಚ್** ತಂದೆ ಹನುಮಂತಪ್ಪ, 29 ವರ್ಷ
5. **ದೇವರಾಜ ಆರ್** ತಂದೆ ರಾಮಣ್ಣ, 22 ವರ್ಷ
6. **ಸುರೇಶ ಯಾನೆ ಮಹೇಶ** ತಂದೆ ಹನುಮಂತಾಬೋವಿ, 34 ವರ್ಷ
7. **ತಿಮ್ಮಯ್ಯ ಹೆಚ್** ತಂದೆ ಹನುಮಂತಾಬೋವಿ, 35 ವರ್ಷ
8. **ಗಿರೀಶ** ತಂದೆ ತಿಮ್ಮಾಬೋವಿ , 24 ವರ್ಷ

ಎಲ್ಲರ ವಾಸಃ ದಿಂಡಾವರ ಬೋವಿ ಕಾಲೋನಿ ಗ್ರಾಮ,
ಹಿರಿಯೂರು ತಾಲ್ಲೂಕು

## ದೋಷಾರೋಪಣೆ

**ನಾನು ಶ್ರೀಮತಿ. ಸುಜಾತ ಸುವರ್ಣ.ಬಿ, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಹಿರಿಯೂರು, ಈ ಮೂಲಕ ನಿಮ್ಮನ್ನು ದೋಷಾರೋಪಣೆಗೆ ಗುರಿಪಡಿಸುವುದೇನೆಂದರೆ**

ದಿನಾಂಕ–22.04.2024 ರಂದು 6.00 ಪಿಎಂ ಸಮಯದಲ್ಲಿ ಹಿರಿಯೂರು ತಾಲ್ಲೂಕು ದಿಂಡಾವರ ಭೋವಿ ಕಾಲೋನಿ ಗ್ರಾಮದ ವಾಸಿ ಜಯಣ್ಣ ತಂದೆ ಚಿಕ್ಕಣ್ಣ ರವರ ವಾಸದ ಮನೆಯ ಮುಂದಿನ ಅಂಗಳದಲ್ಲಿ ಆರೋಪಿತರಾದ ನೀವುಗಳು ಮತ್ತು **J**–1 ರವರು (ಕಾನೂನು ಸಂಘರ್ಷಕ್ಕೊಳಗಾದ ಬಾಲಕ) ಹಳೇಯ ದ್ವೇಷವನ್ನು ಇಟ್ಟುಕೊಂಡು ಅಕ್ರಮಗುಂಪುಕಟ್ಟಿಕೊಂಡು ಬಂದು ಗಲಾಟೆ ಮಾಡಿದ್ದು ಆ ಮೂಲಕ ನೀವು ಭಾ ದಂ ಸಂ ಕಲಂ 143 ಸಹವಾಚಕ 149ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶ ಸಾಧನೆಗಾಗಿ ಅಕ್ರಮ ಕೂಟ ಕಟ್ಟಿಕೊಂಡು ಬಂದು ದೊಂಬಿ ಎಬ್ಬಿಸಿ, ಆ ಮೂಲಕ ನೀವು ಭಾ ದಂ ಸಂ ಕಲಂ 147 ಸಹವಾಚಕ 149 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶ ಸಾಧನೆಗಾಗಿ ಅಕ್ರಮ ಕೂಟ ಕಟ್ಟಿಕೊಂಡು ಕೈಗಳಲ್ಲಿ ಕಲ್ಲು ಮತ್ತು ಕೋಲನ್ನು ಹಿಡಿದುಕೊಂಡು ಹೋಗಿ ದೊಂಬಿ ಎಬ್ಬಿಸಿ, ಆ ಮೂಲಕ ನೀವು ಭಾ ದಂ ಸಂ ಕಲಂ 148 ಸಹವಾಚಕ 149 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

ನಾಲ್ಕನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶ ಸಾಧನೆಗಾಗಿ ಬಂದು ಆರೋಪಿತರು ಮತ್ತು J-1 (ಕಾನೂನು ಸಂಘರ್ಷಕ್ಕೊಳಗಾದ ಬಾಲಕ) ರವರು ಚಾಸಾ.1 ರವರಿಗೆ ಶಾಂತಿಭಂಗ ಮಾಡುವ ಉದ್ದೇಶದಿಂದ ಅವರನ್ನು ಉದ್ರೇಕಿಸುವ ಸಲುವಾಗಿ ಹಳೇಯ ದ್ವೇಷವನ್ನು ಇಟ್ಟುಕೊಂಡು ಬಂದು ಸೂಳೆ ಮಕ್ಕಳ, ಬೋಳಿಮಕ್ಕಳ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿದ್ದು ಆ ಮೂಲಕ ನೀವು ಭಾ ದಂ ಸಂ ಕಲಂ 504 ಸಹವಾಚಕ 149 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

ಐದನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶ ಸಾಧನೆಗಾಗಿ ಬಂದು ನಿಮ್ಮಗಳ ಪೈಕಿ 4 ಮತ್ತು 5 ನೇ ಆರೋಪಿತರು ಹಾಗೂ J-1 ರವರು (ಕಾನೂನು ಸಂಘರ್ಷಕ್ಕೊಳಗಾದ ಬಾಲಕ) ರವರುಗಳು ಚಾಸಾ.1 ರವರಿಗೆ ಕೈ ಕಾಲುಗಳಿಂದ ಮೈ ಕೈಗೆ ಹೊಡೆದಿದ್ದು 1 ರಿಂದ 5 ಮತ್ತು

7 ಆರೋಪಿತರು ಚಾಸಾ.5 ರವರಿಗೆ ಕೈ ಕಾಲುಗಳಿಂದ ಮೈ ಕೈ ಗೆ ಹೊಡೆದಿದ್ದು 1, 7 ಮತ್ತು 8 ನೇ ಆರೋಪಿತರು ಚಾಸಾ.10 ರವರಿಗೆ ಕೈ ಕಾಲುಗಳಿಂದ ಹೊಡೆದಿದ್ದು ನಂತರ ಆರೋಪಿತರೆಲ್ಲರು ಚಾಸಾ.3, 4, 6, ರಿಂದ 8 ರವರಿಗೆ ಕೈ ಕಾಲುಗಳಿಂದ ಮೈ ಕೈಗೆ ಹೊಡೆದು ನೋವುಂಟುಪಡಿಸಿದ್ದು ಆ ಮೂಲಕ ನೀವು ಭಾ ದಂ ಸಂ ಕಲಂ 323 ಸಹವಾಚಕ 149 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

ಆರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶ ಸಾಧನೆಗಾಗಿ ಬಂದು ನಿಮ್ಮಗಳ ಪೈಕಿ 1 ನೇ ಆರೋಪಿಯು ಚಾಸಾ.9 ರವರಿಗೆ ತಲೆಗೆ, ಹೊಟ್ಟೆಗೆ ಕಲ್ಲಿನಿಂದ ಗುದ್ದಿ ಹಾಗೂ ಚಾಸಾ.2 ರವರಿಗೆ ಕಲ್ಲಿನಿಂದ ಎಡಗಾಲಿಗೆ ಗುದ್ದಿದ್ದು ತೀವ್ರ ಸ್ವರುಪದ ಗಾಯವನ್ನುಂಟು ಮಾಡಿದ್ದು , ಆ ಮೂಲಕ ನೀವು ಭಾ ದಂ ಸಂ ಕಲಂ 326 ಸಹವಾಚಕ 149 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

ಏಳನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶ ಸಾಧನೆಗಾಗಿ ಬಂದು ನಿಮ್ಮಗಳ ಪೈಕಿ 7 ನೇ ಆರೋಪಿಯು ಚಾಸಾ.5 ರವರಿಗೆ ಕಟ್ಟಿಗೆಯಿಂದ ಬೆನ್ನಿಗೆ ಹೊಡೆದು ಹಾಗೂ ಚಾಸಾ.10 ರವರಿಗೆ ಕಟ್ಟಿಗೆಯಿಂದ ಎಡಕ್ಕೆ ಮತ್ತು ಬಲಗೈಗೆ ಹೊಡೆದು ಗಾಯಗಳನ್ನುಂಟು ಮಾಡಿದ್ದು, ಆ ಮೂಲಕ ನೀವು ಭಾ ದಂ ಸಂ ಕಲಂ 324 ಸಹವಾಚಕ 149 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶ ಸಾಧನೆಗಾಗಿ ಬಂದು ಚಾಸಾ.10 ರವರಿಗೆ ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ ನಿಮ್ಮ ಪ್ರಾಣ ತೆಗೆಯುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿದ್ದು

ಆ ಮೂಲಕ ನೀವು ಭಾ ದಂ ಸಂ ಕಲಂ 506 ಸಹವಾಚಕ 149 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

(ಈ ಮೇಲೆ ಹೇಳಿದ ಆರೋಪಗಳು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತಿದ್ದು ಈ ಆರೋಪಗಳಿಗಾಗಿ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಒಳಪಡತಕ್ಕದೆಂದು ಈ ಮೂಲಕ ನಾನು ನಿರ್ದೇಶಿಸುತ್ತೇನೆ .)

ದಿನಾಂಕಃ 18.03.2026

ಸ್ಥಳಃ ಹಿರಿಯೂರು

(ಸುಜಾತ ಸುವರ್ಣ. ಬಿ)

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆ ಎಂ ಎಫ್ ಸಿ., ಹಿರಿಯೂರು